# ರ್‍ಯಾಟ್ ರೇಸ್ ಸಹವಾಸವೇ ಬೇಡ: ಕರೀನಾ ಕಪೂರ್



ತಾ ವಾಯಿತು, ತಮ್ಮ ಸಂಸಾರವಾಯಿತು, ಒಂದೈದು ಸ್ನೇಹಿತರ ಕುಟುಂಬಗಳಾದವು, ಅಷ್ಟು ಸಾಕು. ಬೇರೆ ಜಗತ್ತಿನ
ಉಸಾಬರಿಯೇ ಬೇಡ ಎಂದು ನಟಿ ಕರೀನಾ ಕಪೂರ್ ದೀರ್ಘಾವಧಿಯ ನಂತರ ಮಾತನಾಡಿದ್ದಾರೆ. ಸಾಮಾನ್ಯವಾಗಿ
ಸಂದರ್ಶನ ನೀಡಲೂ ಹಿಂಜರಿಯುವವರ ಪೈಕಿ ಅವರು. ಇತ್ತೀಚೆಗೆ ಮಾಧ್ಯಮವೊಂದಕ್ಕೆ ಸುದೀರ್ಘ ಸಂದರ್ಶನ ನೀಡಿರುವುದು
ಕೂಡ ಒಂದು ಸುದ್ದಿಯೇ.

ವಿಮಾನ ನಿಲ್ದಾಣದಲ್ಲಿ ಆಟೊಗ್ರಾಫ್‌ಗೋ ಅಥವಾ ಸೆಲ್ಫಿಗೋ ಜನರು ಮುಗಿಬೀಳುವ ಕಾಲವಿದು. ಅಂತಹ ಯಾರ
ಮನವಿಗೂ ಕರೀನಾ ಸ್ಪಂದಿಸುವುದಿಲ್ಲ. ನಿರ್ಭಾವುಕರಾಗಿ ತಮ್ಮಷ್ಟಕ್ಕೆ ತಾವು ಸಾಗಿಹೋಗುತ್ತಾರೆ. ತಮ್ಮ ವ್ಯಾಯಾಮ, ಮಕ್ಕಳ
ಜೊತೆಗಿನ ವಿಹಾರ, ಅಕ್ಕನ ಭೇಟಿ – ಇಂತಹ ಎಲ್ಲ ಸಂದರ್ಭಗಳಲ್ಲಿಯೂ ಖಾಸಗಿತನವನ್ನು ಕಾಪಾಡಿಕೊಳ್ಳುವುದು ತಮ್ಮ
ಜಾಯಮಾನ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸೈಫ್ ಅಲಿ ಖಾನ್ ಅವರನ್ನು ಮದುವೆಯಾಗಿ, ತಾಯಿ ಆದ ಮೇಲೆ ಕರೀನಾ ಅಭಿನಯಿಸಿದ ಸಿನಿಮಾಗಳ ಸಂಖ್ಯೆ
ಗಣನೀಯವಾಗಿ ಕಡಿಮೆಯಾಯಿತು. 2020ರಲ್ಲಿ ‘ಹಿಂದಿ ಮೀಡಿಯಂ’ ಸಿನಿಮಾದಲ್ಲಿ ನಟಿಸಿದ ನಂತರ ಅಮೀರ್ ಖಾನ್
ಮಹತ್ವಾಕಾಂಕ್ಷೆ ಇಟ್ಟುಕೊಂಡಿದ್ದ ‘ಲಾಲ್ ಸಿಂಗ್ ಛಡ್ಡಾ’ ಚಿತ್ರದ ನಾಯಕಿಯಾದರು. ಈ ವರ್ಷ ‘ಜಾನೆ ಜಾನ್’ ಎಂಬ
ಮಿಸ್ಟರಿ ಥ್ರಿಲ್ಲರ್‌ನಲ್ಲಿ ನಟಿಸಿರುವುದೇ ಅಲ್ಲದೆ, ‘ದಿ ಬಂಕಿಂಗ್‌ಹ್ಯಾಮ್ ಮರ್ಡರ್ಸ್’ ಚಿತ್ರವನ್ನು ನಿರ್ಮಿಸಿ, ನಟಿಸಿದರು. ‘ದಿ ಕ್ರೂ’
ಹಾಗೂ ‘ಸಿಂಗಂ ಎಗೇನ್’ ಸಿನಿಮಾಗಳು ಕೈಲಿವೆ.

ಒಂದು ವೇಳೆ ಈ ದಿನಮಾನದಲ್ಲಿ ತಾವು ನಟಿಯಾಗಿ ಇದ್ದಿದ್ದರೆ ಇಷ್ಟೆಲ್ಲ ಸ್ಪರ್ಧೆಗಳನ್ನು
ಎದುರಿಸಿ, ಏಗಲು ಸಾಧ್ಯವಾಗುತ್ತಿರಲಿಲ್ಲ. ಅಭಿನಯದ ಸಹವಾಸವೇ ಬೇಡ
ಎಂದು ನಿರ್ಧರಿಸಿಬಿಡುತ್ತಿದ್ದುದಾಗಿ ಅವರು ಅಭಿಪ್ರಾಯಪಟ್ಟಿರುವುದು
ಅನೇಕರಿಗೆ ಅಚ್ಚರಿ ತಂದಿದೆ. ‘ಅವಳ ರೀತಿ ಇರಬೇಕು. ಇವಳಂತೆ
ನಡೆಯಬೇಕು. ಆ ನಟಿಯ ಹೇರ್‌ಸ್ಟೈಲ್ ಗಮನಿಸಿದ್ದೀರಾ? ಅಭಿನಯದ
ಮಾದರಿ ಹೇಗೆಂದು ಅವಳನ್ನು ನೋಡಿ ಕಲಿಬೇಕು... ಈ ರೀತಿಯ ಸಲಹೆಗಳು
ಇತ್ತೀಚೆಗೆ ಅನೇಕ ನಟಿಯರ ಕಿವಿಮೇಲೆ ಬೀಳುತ್ತಿವೆ. ಅಸಹಜ ಎನ್ನುವಂತಹ
ಸ್ಪರ್ಧೆಯನ್ನು ಇದು ನಟಿಯರ ನಡುವೆ ಮೂಡಿಸುತ್ತಿದೆ. ಇಷ್ಟೆಲ್ಲ ಒತ್ತಡದ
ಭಾರವನ್ನು ಮನಸ್ಸಿನ ಮೇಲೆ ಹಾಕಿಕೊಂಡು ನಟಿಸುವುದರಲ್ಲಿ ಯಾವ
ಅರ್ಥವೂ ಇಲ್ಲ’ ಎಂದು ಕರೀನಾ ಹೇಳಿರುವುದು ಯಾಕೆ ಎಂಬ ಗುಂಗಿಹುಳ
ಅನೇಕರನ್ನು ಕೊರೆಯುತ್ತಿರಬಹುದು. ಯಾಕೆಂದರೆ, ಹಿಂದೆ ಝೀರೊ ಸೈಜ್‌ಗೆ
ತಮ್ಮ ದೇಹಾಕಾರವನ್ನು ಮಾರ್ಪಡಿಸಿಕೊಂಡಿದ್ದ ನಟಿ ಇವರೆನ್ನುವುದನ್ನು ಅರಿತವರ ■
ಸಂಖ್ಯೆ ದೊಡ್ಡದೇ ಇದೆ.



# ಮೆರ್‍ರಿ ಕ್ರಿಸ್‌ಮಸ್ ಮುಂದಕ್ಕೆ



ಡಿಸೆಂಬರ್ ತಿಂಗಳಲ್ಲಿ ಬಿಡುಗಡೆಗೆ ಸಜ್ಜಾಗಿರುವ ಚಿತ್ರಗಳ ಪಟ್ಟಿ ಉದ್ದವಿದೆ. ‘ಅನಿಮಲ್’ ಚಿತ್ರವು ಡಿಸೆಂಬರ್ 1ರಂದು ಬಿಡುಗಡೆಯಾಗುತ್ತಿದೆ. ಅದಾದ ನಂತರ ‘ಮೆರ್‍ರಿ ಕ್ರಿಸ್‌ಮಸ್’ ತೆರೆಕಾಣಬೇಕಿತ್ತು. ಕ್ರಿಸ್‌ಮಸ್ ಹೊತ್ತಿಗೆ ಬಿಡುಗಡೆಯಾದರೆ ಗಳಿಕೆಗೆ ಅನುಕೂಲವಾಗಬಹುದು ಎಂಬ ಲೆಕ್ಕಾಚಾರವೂ ಇತ್ತು. ಆದರೀಗ ‘ಸಲಾರ್’, ‘ಡಂಕಿ’ ರೀತಿಯ ಸ್ಟಾರ್‌ಗಳ ಚಿತ್ರಗಳು ಸರತಿಯಲ್ಲಿ ಇರುವುದರಿಂದ ಈ ಚಿತ್ರದ ಬಿಡುಗಡೆಯನ್ನು ಜನವರಿ 12ಕ್ಕೆ ಮುಂದೂಡಲಾಗಿದೆ.

ವಿಜಯ್ ಸೇತುಪತಿ ಹಾಗೂ ಕತ್ರಿನಾ ಕೈಫ್ ಕಾಂಬಿನೇಷನ್‌ನ ಈ ಸಿನಿಮಾವನ್ನು ಶ್ರೀರಾಮ್ ರಾಘವನ್ ನಿರ್ದೇಶಿಸಿದ್ದಾರೆ. ಇವರ ನಿರ್ದೇಶನದ ‘ಅಂಧಾಧುನ್’ ಚಿತ್ರವು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿತ್ತು.

ಟಿಪ್ಸ್ ಫಿಲ್ಮ್ಸ್ ಹಾಗೂ ಮ್ಯಾಚ್‌ಬಾಕ್ಸ್ ಪಿಕ್ಚರ್ಸ್ ನಿರ್ಮಾಣದ ಈ ಚಿತ್ರದ ಒಂದು ಪೋಸ್ಟರ್ ಅನ್ನು ನಟಿ ರಾಧಿಕಾ ಆಪ್ಟೆ ಇತ್ತೀಚೆಗೆ ಬಿಡುಗಡೆ ಮಾಡಿದರು. ರಾಧಿಕಾ ಕೂಡ ಈ ಸಿನಿಮಾದಲ್ಲಿ ಒಂದು ಸಣ್ಣ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಥ್ರಿಲ್ಲರ್ ಪ್ರಭೇದದ ಈ ಸಿನಿಮಾದ ಛಾಯಾಚಿತ್ರಗ್ರಾಹಕ ಮಧು ನೀಲಕಂಠನ್. ಪ್ರೀತಂ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿದ್ದಾರೆ. ಸಂಜಯ್ ಕಪೂರ್, ವಿನಯ್ ಪಾಠಕ್, ಟಿನು ಆನಂದ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ ಈ ಸಿನಿಮಾಗೆ 2021ರ ಪ್ರಾರಂಭದಲ್ಲೇ ಕತ್ರಿನಾ ಕೈಫ್ ಸಹಿ ಹಾಕಿದ್ದರು. ಅವರದ್ದೇ ನಟನೆ ಇರುವ ‘ಟೈಗರ್ 3’ ಈಗ ತೆರೆಗೆ ಬಂದಿದೆ. ‘ಮೆರ್‍ರಿ ಕ್ರಿಸ್‌ಮಸ್’ ಬಿಡುಗಡೆ ಮುಂದೂಡಲು ಇದು ಕೂಡ ಒಂದು ಕಾರಣ ಎನ್ನಲಾಗಿದೆ. ■